## ಹುಸಿಯಾಯಿತು ನಂಟು, ಮತ್ತೆ ನಲುಗಿತು ಬದುಕು

ಅದೊಂದು ದಿನ ಅವನಿಗೆ ಶರ್ಟ್ ಕೈಗೆ ಸಿಗಲಿಲ್ಲ... ಮರುದಿನ ಅವನು ಆ ಶರ್ಟ್ ಧರಿಸಿ ತನ್ನೊಬ್ಬ ಕ್ಲೈಂಟ್ ಬಳಿಗೆ ಹೋಗಬೇಕಿತ್ತು. ನಾನು ಸಹ ಅವನೊಂದಿಗೆ ಶರ್ಟ್‌ಗಾಗಿ ಹುಡುಕಾಡಿದೆ, ಆದರೆ ಶರ್ಟ್ ಸಿಗಲಿಲ್ಲ. ನಾನು ಅವನಿಗೆ ಬೇರೆ ಶರ್ಟ್ ಧರಿಸುವಂತೆ ಹೇಳಿದೆ. ಒಂದು ಒಳ್ಳೆಯ ಶರ್ಟ್ ಅನ್ನು ಇಸ್ತ್ರಿ ಮಾಡಿಯೂ ಇಟ್ಟೆ. ಆದರೆ ಅವನು ಒಪ್ಪಲಿಲ್ಲ. ಹಟಮಾರಿ ಮಗುವಿನಂತೆ, ನಾನು ಅದೇ ಶರ್ಟ್ ಹಾಕಿಕೊಳ್ಳಬೇಕು ಎಂದು ಹಟ ಹಿಡಿದ. ನಾನೂ ರೇಗಿ, ನಿಮಗೆ ಹೇಗೆ ಅನ್ನಿಸುತ್ತೋ, ಹಾಗೆ ಮಾಡಿ, ನಾನು ಮಲಗಲು ಹೋಗ್ತಿದ್ದೀನಿ ಎಂದೆ. ಮರುದಿನ ನಾನು ಬೆಳಿಗ್ಗೆ ಶಾಲೆಗೂ ಹೋಗಬೇಕಿತ್ತು.

ಅವನು ಬೆಡ್‌ರೂಮಿಗೆ ಬಂದು, ನನಗೆ ಹೊರಹೋಗಲು ಹೇಳಿ, ಶರ್ಟ್ ಹುಡುಕುವಂತೆ ಆಗ್ರಹಿಸಿದ. ನನಗೆ ನಿದ್ರೆ ಬರುತ್ತಿತ್ತು, ಹೀಗಾಗಿ ನಾನು ಹೋಗಲಿಲ್ಲ. ರಗ್ಗನ್ನು ಹೊದ್ದು ನಿದ್ರಿಸಲು ಪ್ರಯತ್ನಿಸಿದೆ. ಅವನು ಅಕಸ್ಮಾತ್ ನನ್ನನ್ನು ಹಾಸಿಗೆಯಿಂದ ಹೊರಗೆಳೆದುಕೊಂಡು ಹೋಗಿ, ನನ್ನನ್ನು ಕೆಳಗೆ ಹಾಕಿದ. ನನ್ನ ಮೇಲೆ ನಿಂತು ನನ್ನ ಮುಖಕ್ಕೆ ಉಗಿದ.

'ಓಹ್... ಛೀ!'

ಪಾಲ್, ನನ್ನ ಜೀವನದ ಎಲ್ಲಾ ನಿಜಾಂಶಗಳನ್ನು ನಿಮಗೆ ಹೇಳುತ್ತಿಲ್ಲ. ಅವನ್ನೆಲ್ಲಾ ನೀವು ಕೇಳಲಾರಿರಿ.

'ನನ್ನ ಸಿಟ್ಟಿಗೆ ನೀನೇ ಕಾರಣ, ಒಂದು ವೇಳೆ ನೀನು ನನ್ನ ಆದೇಶಗಳನ್ನು ಪಾಲಿಸಿದರೆ ಹಾಗೂ ನನಗೆ ಸಿಟ್ಟು ಬರದಂತೆ ನೋಡಿಕೊಂಡಿದ್ದರೆ, ನಿನಗೆ ಹೊಡೆಯುವ ಸಮಯವೇ ಬರುತ್ತಿರಲಿಲ್ಲ' ಎಂದು ತನ್ನ ದುರ್ವ್ಯವಹಾರಗಳಿಗೆ ನನ್ನನ್ನೇ ದೋಷಿ ಎಂದು ಹೇಳಿದ. ಒಂದು ವೇಳೆ ನನ್ನ ವರ್ತನೆಯಲ್ಲಿ ಮೃದುತ್ವವನ್ನು ತಂದುಕೊಂಡು, ಅವನಿಗೆ ತಲೆ ಬಾಗಿದರೆ, ನನ್ನ ಬಗ್ಗೆ ಅವನ ಶಾರೀರಿಕ ದುರ್ವ್ಯವಹಾರಗಳು ನಿಲ್ಲಬಹುದು ಎಂದು ಯೋಚಿಸಿದೆ. ಆದರೆ ನಾನೆಷ್ಟೇ ಸುಧಾರಿಸಿಕೊಂಡು, ನನ್ನ ಅಹಂಕಾರವನ್ನು ತ್ಯಜಿಸಿದಾಗ್ಯೂ, ಅವನು ನನಗೆ ಹೊಡೆಯುವುದನ್ನು ನಿಲ್ಲಿಸಲಿಲ್ಲ. ಇದು ನನ್ನ ದುರದೃಷ್ಟವೇ ಆಗಿತ್ತು.

ಅದು ಈಸ್ಟರ್ ಸಮಯವಾಗಿತ್ತು. ಗುಡ್‌ಫ್ರೈಡೆಯ ಸಂಜೆಯ ವೇಳೆ. ಬೆಳಿಗ್ಗೆಯಿಂದ ನಾವು ಮನೆಯಲ್ಲಿದ್ದೆವು. ನಂತರ ಇದ್ದಕ್ಕಿದ್ದಂತೆ, ಸುತ್ತಾಡಿಕೊಂಡು ಬರುವ ಪ್ರೋಗ್ರಾಮ್ ಹಾಕಿದೆವು... ಸಿನಿಮಾ ನೋಡಿ, ಹೊರಗೇ ಊಟ ಮಾಡುವ ಪ್ಲಾನ್ ಮಾಡಿದೆವು. ವಾಲ್ಕಿಂಗ್ ಸ್ಟ್ರೀಟ್‌ನಲ್ಲಿದ್ದ ಗೋಲ್ಡ್ ಶೋರೂಮ್ ಎದುರಿಗಿದ್ದ ಮೆಕ್ಸಿಕನ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಲು ಸಹ ನಿರ್ಧರಿಸಲಾಯಿತು. ನಾನು ತುಂಬಾ ಉತ್ಸುಕತೆಯಿಂದ ಸಿದ್ಧಳಾದೆ. ಮೊಣಕಾಲಿನವರೆಗಿನ ಉದ್ದನೆಯ ಮಿಡಿ ಧರಿಸಿದೆ, ಕಾಲುಗಳಿಗೆ ಟೈಟ್ಸ್, ಹೈಹೀಲ್‌ನ ಸ್ಯಾಂಡಲ್ ಹಾಕಿಕೊಂಡು ಪರ್ಸ್ ತೆಗೆದುಕೊಂಡೆ. ಲಾರ್ಸ್ ಸಹ ಪ್ಯಾಂಟ್–ಶರ್ಟ್ ಮತ್ತು ಹೊಸ ಜಾಕೆಟ್ ಧರಿಸಿ, ತಲೆಗೆ ಎಣ್ಣೆ ಹಚ್ಚಿಕೊಂಡು ಸಿದ್ಧನಾದ.

